ಇ) ಈಗ ಇರುವ ಪೀಠಗಳಿಗೆ ಸರಕಾರದವರು ನೆರವು ನೀಡಿದ್ದಾರೆಯೇ ?

ಈ) ಹಾಗಿದ್ದಲ್ಲಿ ಪ್ರತಿಯೊಂದು ಪೀಠಕ್ಕೂ ನೀಡಿರುವ ಹಣವೆಷ್ಟು ?

ಶ್ರೀ ಎಂ. ರಘುಪತಿ (ವಿದ್ಯಾ ಮಂತ್ರಿಗಳು).—

ಅ) ಇಲ್ಲ.

ಆ) ಈ ಪೀಠಗಳನ್ನು ಸ್ಥಾಪಿಸಬೇಕಾದರೆ ಸರ್ಕಾರದಲ್ಲಿ ಹಣದ ಕೊರತೆ. ಮತ್ತು ಇದಕ್ಕೆ ಅಗತ್ಯವಾದ ಕಟ್ಟಡ, ಇತರ ಸಲಕರಣೆ ಹಾಗೂ ಹಣ ಒದಗಿಸಲು ದಾನಿಗಳು ಮುಂದೆ ಬಾರದಿರುವುದು.

ಇ) ತಗ ಹಾಲಿ ಇರುವ ಆರು ಪೀಠಗಳ ಪೈಕಿ ಒಂದಕ್ಕೆ ಮಾತ್ರ ಅಂದರೆ ಆಯುರ್ವೇದ ಭೂಷಣ ಎಂ.ವಿ. ಶಾಸ್ತ್ರಿ ಸ್ಮಾರಕ ಆಯುರ್ವೇದ ಮತ್ತು ಸಂಸ್ಕೃತ ಪೀಠಕ್ಕೆ ಕರ್ನಾಟಕ ಸರ್ಕಾರ ನೆರವು ನೀಡಿದೆ.

ಈ) ಮೇಲೆ ತಿಳಿಸಿದ ಒಂದು ಪೀಠಕ್ಕೆ ಮಾತ್ರ ಸರ್ಕಾರದಿಂದ ೨ ಲಕ್ಷ ರೂ. ಮಂಜೂರು ಆಗಿದೆ. ಅಲ್ಲದೆ ಸರ್ಕಾರದಿಂದ ಯಾವ ಪೀಠಕ್ಕೂ ಹಣ ಮಂಜೂರು ಮಾಡಿರುವುದಿಲ್ಲ.

ಉಚಿತ ಪಠ್ಯ ಪುಸ್ತಕಗಳ ಬಿಡುಗಡೆ

೧೦೬ (೭೭೭) ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿ ಒಂದನೇ ತರಗತಿಯಿಂದ ಏಳನೇ ತರಗತಿಯವರೆಗಿನ ಎಷ್ಟು ಜನ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳು ವಿತರಣೆ ಆಗಬೇಕಾಗಿದೆ ?

ಆ) ಇದರಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿಗೆ ಈಗಾಗಲೇ ಪಠ್ಯಪುಸ್ತಕಗಳು ವಿತರಣೆಯಾಗಿದೆ,

ಇ) ೧ನೇ ತರಗತಿಯಲ್ಲಿನ ಒಬ್ಬ ವಿದ್ಯಾರ್ಥಿಗೆ ಉಚಿತ ಪಠ್ಯಪುಸ್ತಕ ಒದಗಿಸಲು ಎಷ್ಟು ಖರ್ಚು ಬರುತ್ತದೆ, ೨ನೇ ತರಗತಿಯಲ್ಲಿನ ಒಬ್ಬ ವಿದ್ಯಾರ್ಥಿಗೆ ಎಷ್ಟು ಖರ್ಚು ಬರುತ್ತದೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ಫಲಾನುಭವಿಗಳು ೫೨,೧೩,೧೯೫. ೧೦,೭೫,೨೫೯ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಆಗಬೇಕಾಗಿದೆ.

ಆ) ೪೧,೩೭,೯೩೬ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಆಗಿದೆ. (೨೩-೭-೮೫ ರಂತೆ)

ಇ) ಒಂದನೇ ತರಗತಿಯ ವಿದ್ಯಾರ್ಥಿಗೆ

ಮಾತೃಭಾಷೆ	–	೧-೩೦ ರೂ. ಗಳು
ಇಂಗ್ಲೀಷ್	–	೨-೦೦ ,,

ಎರಡನೇ ತರಗತಿಯ ವಿದ್ಯಾರ್ಥಿಗೆ

ಮಾತೃಭಾಷೆ	–	೧-೪೦ ರೂ. ಗಳು
ಇಂಗ್ಲೀಷ್	–	೨-೨೦ ,,

ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರ ವಹಿಸಿಕೊಳ್ಳುವ ಬಗ್ಗೆ

೧೦೭ (೬೫೬). ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಈ ಕೆಳಕಂಡ ಪ್ರಶ್ನೆಗಳಿಗೆ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ:—

ಅ) ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತವನ್ನು ಸರ್ಕಾರದವರೇ ವಹಿಸಿಕೊಳ್ಳುವರೆ ?